# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿರುತ್ತದೆ).

**ನಿಗಮ ಕಾರ್ಯಾಲಯ,**
CIN : U40109KA2004SGC035177
ವಿಜಯನಗರ 2ನೇ ಹಂತ, ಹಿನಕಲ್, ಮೈಸೂರು-17.
Website : www.cescmysore.org

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ರವರ ಕಛೇರಿ,
ಕಾರ್ಯ ಮತ್ತು ಪಾಲನೆ ಜ್ಯೋತಿನಗರ, ಉಪ-ವಿಭಾಗ,
ಚಾ.ವಿ.ಸ.ನಿ.ನಿ., ಮೈಸೂರು.
ದೂರವಾಣಿ : 0821-2450020

ಕ್ರ.ಸಂ. : ಸ.ಕಾ.ನಿ.ಇಂ.(ವಿ)/ಸಲೆ/ಜ್ಯೋತಿನಗರ/17-18/ 4171-72 ದಿನಾಂಕ : 8-01-19

## ಜನಸಂಪರ್ಕಸಭಾ ನಡಾವಳಿ

ದಿನಾಂಕ 04.01.2019 ರಂದು ಮಧ್ಯಾಹಃ 12.30 ಗಂಟೆಗೆ ಜ್ಯೋತಿನಗರ ಉಪವಿಭಾಗದಲ್ಲಿ ಶ್ರೀ.ಮುಜ಼ಾಮಿಲ್ ಖಾನ್, ಕಾರ್ಯಪಾಲಕ ಇಂಜಿನಿಯರ್(ಕ), ಕಾ&ಪಾ ವೃತ್ತ, ಸೆಸ್ಕ್, ಮೈಸೂರು ರವರ ಅಧ್ಯಕ್ಷತೆಯಲ್ಲಿ ಗ್ರಾಹಕರ ಕುಂದು-ಕೊರತೆ ನಿವಾರಣೆ ಸಭೆ ನಡೆಸಲಾಯಿತು.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ ಗ್ರಾಹಕರ ವಿವರ**

| ಕ್ರ.ಸಂ. | ಅಧಿಕಾರಿ/ನೌಕರನ ಹೆಸರು | ಪದನಾಮ | ಉಪವಿಭಾಗ/ ಶಾಖೆಯ ಹೆಸರು |
|---|---|---|---|
| 1 | ಶ್ರೀ ಮುಜ಼ಾಮಿಲ್ ಖಾನ್ | ಕಾರ್ಯನಿರ್ವಾಹಕ ಇಂಜಿನಿಯರ್(ವಿ) | ಕಾ&ಪಾ ವೃತ್ತ,ಮೈಸೂರು |
| 2 | ಶ್ರೀ ರಾಜು ಹೆಚ್.ಜಿ. | ಸ.ಕಾ.ನಿ.ಇಂ(ವಿ) | ಜ್ಯೋತಿನಗರ ಉಪವಿಭಾಗ |
| 3 | ಶ್ರೀ ಯಾಲಕ್ಕಯ್ಯ | ಪ್ರಭಾರ ಸ.ಲೆ.ಅ | ಜ್ಯೋತಿನಗರ ಉಪವಿಭಾಗ |
| 4 | ಶ್ರೀ ಜ಼ಮೀರ್ ಪಾಷ | ಸ.ಇಂ.(ತಾಂ) | ಜ್ಯೋತಿನಗರ ಉಪವಿಭಾಗ |
| 5 | ಶ್ರೀ ಕಿರಣ್ | ಸ.ಇಂ.(ವಿ) | ಜ್ಯೋತಿನಗರ ಶಾಖೆ |
| 6 | ಶ್ರೀ ಸ್ವಾಮಿ.ಸಿ | ಸ.ಇಂ.(ವಿ) | ಉದಯಗಿರಿ ಶಾಖೆ |
| 7 | ಶ್ರೀ ಉಮೇಶ. ಜಿ | ಸ.ಇಂ.(ವಿ) | ಶಾಂತಿನಗರ ಶಾಖೆ |
| 8 | ಶ್ರೀ ತಿಮ್ಮರಾಜು ಕೆ.ಟಿ | ಕಿ.ಇಂ.(ವಿ) | ಉದಯಗಿರಿ ಶಾಖೆ |
| 9 | ಶ್ರೀ ನಾಗಲಿಂಗು | ಕಿ.ಇಂ.(ವಿ) | ಜ್ಯೋತಿನಗರ ಶಾಖೆ |
| 10 | ಶ್ರೀ ಅಶ್ವತ್ಥನಾರಾಯಣ ಸಿ.ಆರ್ | - | ಗ್ರಾಹಕರು |
| 11 | ಶ್ರೀ ವಾಹಿದ್ ಉಲ್ಲಾ ಖಾನ್ | - | ಗ್ರಾಹಕರು |

# ಸಭೆಯಲ್ಲಿ ಚರ್ಚಿಸಿದ ವಿಷಯಗಳು ಈ ಕೆಳಕಂಡಂತಿವೆ.

ಕಾರ್ಯಪಾಲಕ ಇಂಜಿನಿಯರ್(ವಿ), ಕಾ&ಪಾ ವೃತ್ತ, ಸೆಸ್ಕ್, ಮೈಸೂರು ರವರು ಗ್ರಾಹಕರ ಕುಂದು-ಕೊರತೆ ನಿವಾರಣಾ ಸಭೆಗೆ ಎಲ್ಲರನ್ನೂ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸಲಾಯಿತು ಹಾಗೂ ಸಭೆಗೆ ಆಗಮಿಸಿದ ಗ್ರಾಹಕರುಗಳ ಮನವಿಗೆ ಈ ಕೆಳಕಂಡಂತೆ ಸ್ಪಷ್ಟೀಕರಣ ನೀಡಿದರು.

| | | | |
|---|---|---|---|
| 1 | ಶ್ರೀ ವಾಹಿದ್ ಉಲ್ಲಾ ಖಾನ್<br>ಮೊ:9141433549 | a)LT-7 ಜಕಾತಿಯಡಿ ವಿದ್ಯುತ್ ಸಂಪರ್ಕ ಪಡೆಯಲು ಜ್ಯೋತಿನಗರ ಉಪವಿಭಾಗದಲ್ಲಿ ಸ್ಟ್ಯಾಟಿಕ್ ಮಾಪಕಗಳಿಲ್ಲವೆಂದೂ ಹಾಗೂ ಬೇರೆ ಉಪವಿಭಾಗಗಳಲ್ಲಿ ಒದಗಿಸುತ್ತಿರುವ ಹಾಗೆ ಎಲೆಕ್ಟ್ರೋಮೆಕ್ಯಾನಿಕಲ್ ಮಾಪಕಗಳನ್ನಾದರೂ ನೀಡಿ ವಿದ್ಯುತ್ ಸಂಪರ್ಕ ಕಲ್ಪಿಸುವಂತೆ ಕೋರಿರುತ್ತಾರೆ. | ಕಾರ್ಯಪಾಲಕ ಇಂಜಿನಿಯರ್(ವಿ)ರವರು ಸದರಿ ವಿಷಯದ ಬಗ್ಗೆ ಮಾತನಾಡಿ ಮಾಪಕಗಳ ಸಮಸ್ಯೆ ಎಲ್ಲಾ ಉಪವಿಭಾಗಗಳಲ್ಲಿಯೂ ಇದ್ದು 2-3 ದಿನಗಳಲ್ಲಿ ಬಗೆಹರಿಸಿಕೊಡುತ್ತೇವೆಂದು ತಿಳಿಸಿರುತ್ತಾರೆ. |
| | | b)ಉಪವಿಭಾಗದ ಮಟ್ಟದಲ್ಲಿ ಶಾಶ್ವತ ವಿದ್ಯುತ್ ನಿಲುಗಡೆ(Permanent disconnection)ಕೇಸ್‌ಗಳು ನಿಧಾನಗತಿಯಲ್ಲಿ ಆಗುತ್ತಿವೆಯೆಂದು ದೂರಿರುತ್ತಾರೆ. | ಸದರಿ ವಿಷಯವಾಗಿ ಸಹಾಯಕ ಲೆಕ್ಕಾಧಿಕಾರಿಯವರು ಮಾತನಾಡಿ, ಕಳೆದ ತಿಂಗಳಿನಿಂದ ಸರ್ವರ್ ಸಮಸ್ಯೆ ಇದ್ದುದರಿಂದ ಶಾಶ್ವತ ವಿದ್ಯುತ್ ನಿಲುಗಡೆ ಕೇಸ್‌ಗಳನ್ನು ನಿರ್ವಹಿಸಲು ತಡವಾಯಿತೆಂದು ತಿಳಿಸಿರುತ್ತಾರೆ. |
| | | c) LT-7 ಜಕಾತಿಯ ಸ್ಥಾವರಗಳಿಗೆ ವಾರದ ಬಿಲ್ಲುಗಳನ್ನು ವಿತರಿಸುತ್ತಿಲ್ಲವೆಂದು ದೂರಿರುತ್ತಾರೆ. | ಸದರಿ ವಿಷಯವಾಗಿ ಸಹಾಯಕ ಲೆಕ್ಕಾಧಿಕಾರಿಯವರು ಮಾತನಾಡಿ, ಕಂದಾಯಶಾಖೆಯ LT-7 ಜಕಾತಿಯ ಸ್ಥಾವರಗಳಿಗೆ ವಾರದ ಬಿಲ್ಲುಗಳನ್ನು ವಿತರಿಸುತ್ತಿದ್ದ ಸಿಬ್ಬಂದಿಯ ವರ್ಗಾವಣೆಯಾಗಿದ್ದು, ಹಾಗೂ ಕಂದಾಯ ಶಾಖೆಯಲ್ಲಿ 4 ಸಿಬ್ಬಂದಿಗಳ ಕೊರತೆಯಿಂದ ಕಳೆದೊಂದು ವಾರದಿಂದ ವಾರದ ಬಿಲ್ಲುಗಳನ್ನು ವಿತರಿಸಿಲ್ಲವೆಂದು ತಿಳಿಸಿರುತ್ತಾರೆ.<br>ನಂತರ ಕಾರ್ಯಪಾಲಕ ಇಂಜಿನಿಯರ್(ವಿ)ರವರು ಮಾತನಾಡಿ, ವಾರದ ಬಿಲ್ಲುಗಳನ್ನು ಸಮಯಕ್ಕೆ ಸರಿಯಾಗಿ ವಿತರಿಸುವಂತೆ ಆದೇಶಿಸಿರುತ್ತಾರೆ ಹಾಗೂ ಖಾಲಿಯಿರುವ ಸಿಬ್ಬಂದಿಗಳ ಜಾಗವನ್ನು ತುಂಬಲು ಮೇಲಾಧಿಕಾರಿಗಳಿಗೆ ಪತ್ರಿಸುವಂತೆ ತಿಳಿಸಿರುತ್ತಾರೆ |

| | | | |
|---|---|---|---|
| 2 | ಶ್ರೀ ಅಶ್ವತ್ಥನಾರಾಯಣ, ಹಿಂದುಸ್ಥಾನ್ ಎಲೆಕ್ಟ್ರಿಕಲ್ಸ್, ಶಿವರಾಂಪೇಟೆ, ಮೈಸೂರು ಮೊ : 9449833792 | ಕೆ.ಇ.ಆರ್.ಸಿ ನಿಯಮಾವಳಿ 12.04(ii)b ಪ್ರಕಾರ ತಾತ್ಕಾಲಿಕ ಸ್ಥಾವರಗಳ ಕಟ್ಟಡಗಳ ಎತ್ತರವು 15 ಮೀ. ಮೀರಿದರೆ, ಅಂತಹ ಸ್ಥಾಪನಗಳಿಗೆ ವಿದ್ಯುತ್ ಪರಿವೀಕ್ಷಕರ ಅನುಮತಿ ಪಡೆದು, ವಿದ್ಯುತ್ ಸಂಪರ್ಕ ನೀಡಬೇಕಾಗಿರುತ್ತದೆ. ಆದರೆ ಜ್ಯೋತಿನಗರ ಉಪವಿಭಾಗದಲ್ಲಿ ಇದನ್ನು ಪಾಲಿಸುತ್ತಿಲ್ಲವೆಂದೂ ಹಾಗೂ ತಾತ್ಕಾಲಿಕ ಸ್ಥಾವರಗಳಿಗೆ ವಾರದ ಬಿಲ್ಲುಗಳನ್ನು ವಿತರಿಸುವಾಗ ಅಥವಾ ಸ್ಥಾವರದ ನವೀಕರಣದ ಸಂದರ್ಭದಲ್ಲಿ ಕಟ್ಟಡದ ಎತ್ತರವನ್ನು ಗಮನಿಸುವಂತೆ ಕೋರಿರುತ್ತಾರೆ. | ಕಾರ್ಯಪಾಲಕ ಇಂಜಿನಿಯರ್(ವಿ)ರವರು ಮಾತನಾಡಿ ಎಲ್ಲಾ ಶಾಖಾಧಿಕಾರಿಗಳೂ ಸದರಿ ಕೆ.ಇ.ಆರ್.ಸಿ ನಿಯಮಾವಳಿ ಯನ್ನು ಪಾಲಿಸುವಂತೆಯೂ ಹಾಗೂ ತಾತ್ಕಾಲಿಕ ಸ್ಥಾವರಗಳಿಗೆ ವಾರದ ಬಿಲ್ಲುಗಳನ್ನು ವಿತರಿಸುವಾಗ ಅಥವಾ ಸ್ಥಾವರದ ನವೀಕರಣದ ಸಂದರ್ಭದಲ್ಲಿ ಕಟ್ಟಡದ ಎತ್ತರವನ್ನು ಗಮನಿಸುವಂತೆ ಆದೇಶಿಸಿರುತ್ತಾರೆ. |

ಸಭೆಯಲ್ಲಿ ಭಾಗವಹಿಸಿದ್ದ ಎಲ್ಲರಿಗೂ ಸಭಾಧ್ಯಕ್ಷರು ವಂದನೆಯನ್ನು ತಿಳಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು.

ತಮ್ಮ ವಿಶ್ವಾಸಿ,

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಕಾರ್ಯ ಮತ್ತು ಪಾಲನೆ ಉಪ-ವಿಭಾಗ,
ಜ್ಯೋತಿನಗರ, ಮೈಸೂರು

ಪ್ರತಿಯನ್ನು .

1. ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಚಾ.ವಿ.ಸ.ನಿ.ನಿ., ಮೈಸೂರುರವರ ಅವಗಾಹನೆಗೆ ಸಲ್ಲಿಸಲಾಗಿದೆ.
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ನ.ರಾ.ಮೊಹಲ್ಲಾ ವಿಭಾಗ, ಚಾ.ವಿ.ಸ.ನಿ.ನಿ., ಮೈಸೂರುರವರ ಅವಗಾಹನೆಗೆ ಸಲ್ಲಿಸಲಾಗಿದೆ.
3. ಸಹಾಯಕ ಇಂಜಿನಿಯರ್(ವಿ), ಜ್ಯೋತಿನಗರ/ ಶಾಂತಿನಗರ/ ಉದಯಗಿರಿ.
4. ಸಲೆಅ/ ಕಡತ.